




ಸ್ಥಳೀಯರ ವ್ಯಾಪಾರ ಕೇಂದ್ರ



ಮನಮೋಹಕ ಸಮುದ್ರ ತೀರ

ಹಿಂದಿರುಗುವಾಗ ವಿಭೀಷಣನ ಸಲಹೆಯ ಮೇರೆಗೆ ರಾಮ ಬಿಲ್ಲಿನ ತುದಿಯಿಂದ ಈ ಸೇತುವೆಯನ್ನು ನಾಶ ಮಾಡಿದ ಎನ್ನುವ ಐತಿಹ್ಯವಿದೆ. ಈ ಕಾರಣಕ್ಕೇ ಇದಕ್ಕೆ ಧನುಷ್ಕೋಟಿ (ಧನುಷ್ + ಕೋಡಿ ) ಎಂಬ ಹೆಸರು ಬಂದಿತೆಂಬ ನಂಬಿಕೆಯೂ ಇದೆ. ಸೇತುವೆಯ ಕುರುಹುಗಳನ್ನು ಈಗಲೂ ನೋಡಬಹುದು.

ಕೇವಲ 45 ಮೀಟರ್ ವಿಸ್ತೀರ್ಣ ಹೊಂದಿರುವ ನಡುಗಡ್ಡೆಯಂತೆ ಇರುವ ಪ್ರವಾಸಿ ಆಕರ್ಷಣೀಯ ಈ ದ್ವೀಪಕ್ಕೆ ಮುಖ್ಯ ರಸ್ತೆಯಿಂದ ಹೋಗಲು ಸುಸಜ್ಜಿತ ರಸ್ತೆ, ವಾಹನ ಸೌಕರ್ಯ ಇಲ್ಲ. ಟೆಂಪೋ ಮತ್ತು ಜೀಪ್‌ಗಳ ಮೂಲಕ ಹೋಗಬಹುದು. ಒಬ್ಬರಿಗೆ ರೂ.150 ಶುಲ್ಕ. ಮರಳಿನ ದಿಬ್ಬಗಳನ್ನು ಏರಿ ಇಳಿಯುತ್ತಾ, ನೀರಿನ ಮಧ್ಯೆ ಸುಮಾರು 20 ನಿಮಿಷ ಸಾಗುವ ಈ ವಾಹನಗಳ ಸವಾರಿಯೂ ಒಂದು ವಿಶಿಷ್ಟ ಅನುಭವ. ಸಮುದ್ರದಲ್ಲಿ ಸಿಗುವ ವಿವಿಧ ಆಕಾರದ ಶಂಖ ಇನ್ನಿತರ ವಸ್ತುಗಳಿಂದ ತಯಾರಿಸಿದ ಅಲಂಕಾರಿಕ ಸಾಮಗ್ರಿಗಳನ್ನು ಮಾರುವವರ ಹತ್ತಾರು ಅಂಗಡಿಗಳು ಈಗಲೂ ಇಲ್ಲಿವೆ.

ತೆಂಗಿನಗರಿಗಳ ಲೇಲುಹೊದಿಕೆ ಹಾಕಿಕೊಂಡಿರುವ ಅಂಗಡಿಗಳನ್ನು ನಡೆಸುವವರಿಗೆ ಪ್ರವಾಸಿಗರೇ ಬಂಡವಾಳ. ಹೀಗಾಗಿ ಇಲ್ಲಿ ಬೆಲೆಯೂ ಅಧಿಕ. ಪುರುಷರು ಸಣ್ಣ ಪ್ರಮಾಣದ ಮೀನುಗಾರಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಧಾರ್ಮಿಕ ನಂಬಿಕೆ ಇರುವ ವ್ಯಕ್ತಿಗಳು ಹಿರಿಯರ ಮರಣದ ಬಳಿಕದ ಅಂತಿಮ ಕಾರ್ಯಗಳನ್ನು ನಡೆಸಿ ಇಲ್ಲಿ ಅಸ್ಥಿ ವಿಸರ್ಜಿಸಲೂ ಬರುತ್ತಾರೆ.

ಸಮುದ್ರ ಅಷ್ಟೊಂದು ಆಳವಾಗಿ ಇಲ್ಲದಿರುವುದರಿಂದ ಪ್ರವಾಸಿಗರು ನೀರಿನಲ್ಲಿ ನಡೆದಾಡಿ ಸಂಭ್ರಮಿಸುತ್ತಾರೆ. ಕೆಲವರು ನೀರಿನಲ್ಲಿ ಸಾಕಷ್ಟು ದೂರ ನಡೆದು ಹೋಗಿ ಬರುತ್ತಾರೆ. ಸಮುದ್ರದ ತಳ ಕಾಣುವುದು ಇಲ್ಲಿನ ವಿಶೇಷ. ವಿಸ್ಮಯವೂ ಹೌದು. ಜೊತೆಗೆ ಹೆಜ್ಜೆ ಹಾಕಲು ಹೆಚ್ಚು ಜನ ಇದ್ದರೆ ನಡೆದೇ ಈ ಸ್ಥಳವನ್ನು ಮುಟ್ಟಬಹುದು. ರೈಲ್ವೆ ನಿಲ್ದಾಣದ ಕುರುಹುಗಳು ಅಲ್ಲದೆ ಒಂದು ಶಿವ ದೇವಾಲಯವೂ ದಾರಿಯ ಮಧ್ಯೆ ಸಿಗುತ್ತದೆ. ಇಲ್ಲಿನ ಶಿವಲಿಂಗ ಸುಂದರವಾಗಿದೆ. ಸಮುದ್ರದಲ್ಲಿ ಸಿಗುವ ಗಟ್ಟಿ ಸ್ಪಂಜಿನ ಮಾದರಿಯ ತೇಲುವ ವಸ್ತು ಕೂಡಾ ಇಲ್ಲಿನ ಮುಖ್ಯ ಆಕರ್ಷಣೆ. ಈಗಲೂ ಇಲ್ಲಿ ಒಂದಿಷ್ಟು ಕುಟುಂಬಗಳು ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿವೆ. ಮೀನುಗಾರಿಕೆ ಮತ್ತು ಪ್ರವಾಸಿಗರಿಂದ ಬರುವ ಆದಾಯ ಇವರ ಬದುಕಿಗೆ ಆಧಾರ. ಒಂದು ದಿನದ ಪ್ರವಾಸಕ್ಕೆ ಹೇಳಿ ಮಾಡಿಸಿದ ಅತ್ಯಂತ ಹೆಚ್ಚು ಮನೋಲ್ಲಾಸ ನೀಡುವ ಸ್ಥಳವಿದು.